**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕ 31-08-2021**

**ಪಾಟೀ ಸವಾಲು – 5ನೇ ಪ್ರತಿವಾದಿ ಪರ ಶ್ರೀ. ಹೆಚ್.ಕೆ.ಆರ್., ವಕೀಲರಿಂದ**

2) ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೇನು ಬರೆದಿದೆ ಎಂದು ನನಗೆ ಗೊತ್ತಿದೆ. ನನ್ನ ಪ್ರಮಾಣ ಪತ್ರವನ್ನು ನಾನೇ ವಕೀಲರಿಗೆ ಹೇಳಿ ಬರೆಸಿದ್ದೆ. ವಾದಿಗಳು ಈ ದಾವೆಯನ್ನು ಪಾಲು ವಿಭಾಗಕ್ಕಾಗಿ ಸಲ್ಲಿಸಿದ್ದಾರೆ. ವಾದಿಗಳು ಬಾಲದಿಮ್ಮನಹಳ್ಳಿ ಸರ್ವೆ ನಂ.26 ರ ಆಸ್ತಿ ಬಗ್ಗೆ ದಾವೆ ಹಾಕಿದ್ದಾರೆ. ಅದು 1 ಎಕರೆ ಮೂವತ್ನಾಲ್ಕುವರೆ ಗುಂಟೆ ಇದ್ದು, ಅದರ ಪೂರ್ವಕ್ಕೆ ಬಚ್ಚೇಗೌಡ ವೆಂಕಟರಮಣ ರವರ ಆಸ್ತಿ, ಪಶ್ಚಿಮಕ್ಕೆ ಆಂಜಿನಪ್ಪನ ಆಸ್ತಿ, ಉತ್ತರಕ್ಕೆ ಕಾಲುವೆ ಮತ್ತು ದಕ್ಷಿಣಕ್ಕೆ ಗ್ರಾಮಠಾಣಾ ಇರುತ್ತದೆ. ನಾನು ಚಿಕ್ಕ ಹೊಸಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ. ನಾನು ವಾದಿಗಳು ವಾಸ ಮಾಡುವ ಊರಿನಲ್ಲಿ ವಾಸ ಮಾಡುವುದಿಲ್ಲ ಎಂದರೆ ಸರಿ, ಆದರೆ ನಮ್ಮ ಜಮೀನುಗಳು ಪಕ್ಕ-ಪಕ್ಕದಲ್ಲಿವೆ. ವಾದಿ ಮತ್ತು 1 ರಿಂದ 3ನೇ ಪ್ರತಿವಾದಿಗಳ ಕುಟುಂಬ ನನಗೆ ಸುಮಾರು 35 ವರ್ಷಗಳಿಂದಲೂ ಪರಿಚಯವಿದೆ. ನಿಮಗೆ ಅವರ ಪರಿಚಯ ಹೇಗಾಯಿತು ಎಂದರೆ ನಮ್ಮ ಜಮೀನುಗಳು ಅಕ್ಕ-ಪಕ್ಕದಲ್ಲಿವೆ. 1ನೇ ಪ್ರತಿವಾದಿಯ ಕುಟುಂಬದವರು ಪರಿಚಯವೇ? ಎಂದರೆ ಪರಿಚಯ. ಅವರ ಹೆಸರುಗಳು ಹೇಳಿ ಎಂದರೆ ದೊಡ್ಡವರು ರಾಜಣ್ಣ, ಎರಡನೆಯವರು ವೆಂಕಟರೆಡ್ಡಿ, ಮೂರನೆಯವರು ರತ್ನಮ್ಮ, ನಾಲ್ಕನೆಯವರು ರಮೇಶ. 1ನೇ ಪ್ರತಿವಾದಿಯ ಕುಟುಂಬಕ್ಕೆ ದಾವಾ ಸ್ವತ್ತು ಹೇಗೆ ಬಂದಿತ್ತು ಎಂದರೆ ಪಿತ್ರಾರ್ಜಿತವಾಗಿ ಬಂದಿತ್ತು. ನನಗೆ 1ನೇ ಪ್ರತಿವಾದಿಯ ಕುಟುಂಬದ ವ್ಯವಹಾರ ಮಾಹಿತಿ ಇದೆಯೆ? ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. 5ನೇ ಪ್ರತಿವಾದಿಯ ಪರವಾಗಿ 1 ರಿಂದ 4ನೇ ಪ್ರತಿವಾದಿಗಳು ದಿ.05-11-2004 ರಂದು ಕ್ರಯಪತ್ರ ಮಾಡಿಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ಖರೀದಿ ಮಾಡಿದ ಸಮಯದಿಂದ ದಾವಾ ಸ್ವತ್ತಿನ

ಸ್ವಾಧೀನದಲ್ಲಿ 5ನೇ ಪ್ರತಿವಾದಿಯೇ ಇದ್ದಾರೆ ಎಂದರೆ ಸುಳ್ಳು. 1 ರಿಂದ 4ನೇ ಪ್ರತಿವಾದಿಗಳ ಕುಟುಂಬದ ಹಣ ಕಾಸಿನ ಪರಿಸ್ಥಿತಿ ಬಗ್ಗೆ ನಿಮಗೆ ಗೊತ್ತೇ ಎಂದರೆ ಅವರಿಗೆ ಹಣ ಕಾಸಿನ ಬಗ್ಗೆ ಯಾವುದೇ ತೊಂದರೆ ಬಂದಿಲ್ಲ. 1 ರಿಂದ 4ನೇ ಪ್ರತಿವಾದಿಗಳು ತಮ್ಮ ಕುಟುಂಬದ ಕಷ್ಟಕ್ಕಾಗಿ ಮತ್ತು ಆರ್ಥಿಕ ತೊಂದರೆಗಳಿಗಾಗಿ 5ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಗಳ ಕುಟುಂಬದವರೇ ರಾಗಿ, ಜೋಳ ಮತ್ತು ಅವರೆ ಬೆಳೆಗಳನ್ನು ದಾವಾ ಸ್ವತ್ತಿನಲ್ಲಿ ಬೆಳೆಯುತ್ತಿದ್ದಾರೆ, ಬೇರೆ ಯಾರೂ ಬೆಳೆ ಬೆಳೆಯುತ್ತಿಲ್ಲ. 1ನೇ ಪ್ರತಿವಾದಿಯ ಮಕ್ಕಳು ಎಲ್ಲರೂ ಬೇರೆ ಬೇರೆ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಪ್ರತಿವಾದಿಗಳು ಒಟ್ಟಾಗಿ 5ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಟ್ಟರೂ ಕೂಡ ದುರುದ್ದೇಶದಿಂದ ಈ ದಾವೆ ಹಾಕಿದ್ದಾರೆ ಎಂದರೆ 1ನೇ ಪ್ರತಿವಾದಿಯ ಮಕ್ಕಳು ಯಾರೂ ಮಾರಾಟ ಮಾಡಿಲ್ಲ. ನಾನು ವಾದಿಗಳ ಮಾತು ಕೇಳಿ ಕೋರ್ಟಿಗೆ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು – 2ನೇ ಪ್ರತಿವಾದಿ ಪರ ಶ್ರೀ.ಟಿ.ಆರ್., ವಕೀಲರಿಂದ**

3) ದಾವಾ ಜಮೀನಿನಲ್ಲಿ 2 ಮತ್ತು 3ನೇ ಪ್ರತಿವಾದಿ ಕೂಡ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿ.

ಮರು ವಿಚಾರಣೆ – ಇಲ್ಲಾ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ.**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ದೇವನಹಳ್ಳಿ.**